**ಅಸಲು ದಾವಾ ನಂಃ63/2014**
**ಡಿ.ಡಬ್ಲ್ಯೂಃ 01**

**ದಿನಾಂಕಃ23–04–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎಂ ಎಸ್ ಆರ್, 1 ನೇ ಪ್ರತಿವಾದಿ ಪರ ವಕೀಲರಿಂದ**

ದಿಃ11–07–1994 ರ ಕ್ರಯದ ಕರಾರು ಪತ್ರವನ್ನು ಮತ್ತು ದಿಃ28–04–1971 ರ ಕ್ರಯ ಒಪ್ಪಂದದ ಕರಾರು ಪತ್ರವನ್ನು ಕ್ರಮವಾಗಿ ನಿಡಿಃ16 ಮತ್ತು ನಿಡಿಃ17 ಎಂದು, ವಾದಿಯರ ಪರ ವಕೀಲರು ನೋಂದಾಯಿತವಾಗಿರುವುದಿಲ್ಲ ಎಂಬ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ವಿವರಣೆಗಾಗಿ ನಿಡಿಃ17 ರಲ್ಲೆ ನಿಡಿಃ16 ಮತ್ತು ನಿಡಿಃ17 ರ ಕೊರತೆ ಮುದ್ರಾಂಕ ಪಾವತಿಸಿರುವ ಬಗ್ಗೆ ಒಟ್ಟಾಗಿ ಜಿಲ್ಲಾ ನೋಂದಾಣಾಧಿಕಾರಿಗಳು ದೃಡೀಕರಿಸಿರುತ್ತಾರೆ. ಸಾಕ್ಷಿಯು ನಿಡಿಃ16 ರಲ್ಲಿ 1 ನೇ ವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಡಿಃ16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿಃ16 ರ 2 ನೇ ಪುಟದಲ್ಲಿರುವ ಶಿವಮೂರ್ತಿಯವರ ಹೆಬ್ಬೆಟ್ಟನ್ನು ಗುರುತಿಸಿರುತ್ತಾರೆ. ಸಾಕ್ಷಿಯು ನಿಡಿಃ16 ರಲ್ಲಿ ಬಿ. ಚಂದ್ರಪ್ಪರವರ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನೋಡಿ ಗುರುತಿಸಿದ್ದು, ಸದರಿಯವರ ಸಹಿಯನ್ನು ನಿಡಿಃ16(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿಃ16 ರಲ್ಲಿ ಗಂಟು ತಿಮ್ಮಯ್ಯ ಹೆಬ್ಬೆಟ್ಟನ್ನು ಹಾಕಿರುವುದಾಗಿ ಗುರುತಿಸಿ ನುಡಿದಿರುತ್ತಾರೆ. ಸಾಕ್ಷಿಯು ನಿಡಿಃ16 ರಲ್ಲಿ ಮನೋಜರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನೋಡಿ ಗುರುತಿಸಿದ್ದು, ಸದರಿಯವರ ಸಹಿಯನ್ನು ನಿಡಿಃ16(ಸಿ) ಎಂದು ಗುರುತಿಸಲಾಯಿತು.

ಆದ್ದರಿಂದ ಸದರಿ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.